ಇ) ಯಗಚಿ ಯೋಜನೆಯಡಿಯಲ್ಲಿ ಬೇಲೂರು ಮತ್ತು ಚಿಕ್ಕಮಗಳೂರು ಪಟ್ಟಣಕ್ಕೆ 0.360 ಟಿ.ಎಂ.ಸಿ. ನೀರನ್ನು ಕುಡಿಯುವ ನೀರಿಗಾಗಿ ಒದಗಿಸಲಾಗುತ್ತಿದೆ.

850 ಶ್ರೀ ರುದ್ರೇಶ್ ಗೌಡ.ವೈ.ಎನ್ : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೇಲೂರು ತಾಲ್ಲೂಕಿನ ಯಗಚಿ ಯೋಜನೆಯ ಹಿನ್ನೀರಿನಿಂದ ರೈತರು ಜಮೀನನ್ನು ಮತ್ತು ಮನೆಯನ್ನು ಕಳೆದುಕೊಂಡಿರುವುದು ನಿಜವೇ?

ಆ) ನಿಜವಾಗಿದ್ದ, ಪಕ್ಷದಲ್ಲಿ ರೈತರ ಪುನರ್ ವಸತಿ ಯೋಜನೆಯಡಿ ರೈತರಿಗೆ ಮನೆ ಕಟ್ಟಿಕೊಳ್ಳಲು ಸರ್ಕಾರ ನಿವೇಶನ ಮಂಜೂರು ಮಾಡಿರುವುದು ನಿಜವೇ;

ಇ) ಹಾಗಿದ್ದಲ್ಲಿ, ಈ ರೈತರಿಗೆ ಒಂದು ಮನೆಗೆ 4 ಎಕರೆಯಂತೆ ಸರ್ಕಾರಿ ಜಮೀನನ್ನು ಕೊಡುವುದು ನಿಜವೇ;

ಈ) ಹಾಗಿದ್ದಲ್ಲಿ, ಎಷ್ಟು ರೈತರಿಗೆ ಜಮೀನು ನೀಡಲಾಗಿದೆ; ಜಮೀನು ಇದ್ದ ಪಕ್ಷದಲ್ಲಿ ಜಮೀನು ನೀಡಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಹೌದು

ಆ) ಹೌದು

ಇ) ಹೌದು

ಈ)

1. ಜೂನ್ 2009ರ ವರೆಗೆ 5820.36 ಎಕರೆ ಪ್ರದೇಶವನ್ನು 29 ಮುಳುಗಡೆ ಗ್ರಾಮಗಳ 1440 ರೈತರಿಗೆ ವಿತರಿಸಲಾಗಿದೆ. ಜಮೀನು ಹಂಚಿಕೆಯನ್ನು ಸರ್ಕಾರದ ಆದೇಶ ಸಂಖ್ಯೆ:ಆರ್ ಡಿ 126 ಎಜಿಹೆಚ್ 68, ದಿನಾಂಕ:24-06-1971, ರಲ್ಲಿನ ಆದೇಶದಂತೆ 4 ಎಕರೆಗಿಂತ ಹೆಚ್ಚಿನ ಜಮೀನು ಕಳೆದುಕೊಂಡವರಿಗೆ ಗರಿಷ್ಠ 10 ಎಕರೆ, 4 ಎಕರೆ ಹಾಗೂ ಅದಕ್ಕಿಂತ ಕಡಿಮೆ ಜಮೀನು ಕಳೆದುಕೊಂಡವರಿಗೆ ಗರಿಷ್ಠ 4 ಎಕರೆಯಂತೆ ಜಮೀನು ಹಂಚಿಕೆ ಮಾಡಲಾಗಿದೆ.

2. 45 ರೈತರಿಗೆ ಜಮೀನು ಮಂಜೂರಾತಿ ಮಾಡುವುದು ಇನ್ನು ಬಾಕಿ ಇರುತ್ತದೆ. ಈ 45 ಅರ್ಜಿಗಳ ಪೈಕಿ ಅರ್ಜಿಗಳು ಪುನರಾವರ್ತನೆಯಾ ಗಿರುವುದನ್ನು ಪರಿಶೀಲಿಸಿ ನಂತರ ಜಮೀನು ಮಂಜೂರು ಮಾಡಲು ಕ್ರಮ ವಹಿಸಲಾಗುವುದು.

957 ಶ್ರೀ ಸಂಪಂಗಿ, ವೈ(ಕೆ.ಜಿ.ಎಫ್) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಜಿ.ಎಫ್. ವಿಧಾನಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಎಸ್.ಇ.ಝಡ್ ಪ್ರಾರಂಭಕ್ಕೆ ಸರ್ಕಾರ ತೆಗೆದುಕೊಂಡ ಕ್ರಮವೇನು (ವಿವರ ನೀಡುವುದು);

ಆ) ಕ್ಷೇತ್ರದ ವ್ಯಾಪ್ತಿಯಲ್ಲಿ ಕೈಗಾರಿಕಾ ಪ್ರದೇಶ ಪ್ರಾರಂಭ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮದ ವಿವರ ನೀಡುವುದು?

ಇ) ಕ್ಷೇತ್ರದಲ್ಲಿ ಶೇ.75 ಅ.ಜಾತಿ/ಅ.ಪಂಗಡದ ಜನಾಂಗದವರು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಈ ಭಾಗದ ಅಭಿವೃದ್ಧಿಗೆ ವಿಶೇಷ ಪ್ಯಾಕೇಜ್ ನೀಡಲು ಸರ್ಕಾರದಲ್ಲಿ ಚಿಂತನೆ ನಡೆದಿದೆಯೇ; (ವಿವರ ನೀಡುವುದು)

ಶ್ರೀ ಮುರುಗೇಶ್ ಆರ್.ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಕೆಜಿಎಫ್ ವಿಧಾನ ಸಭಾಕ್ಷೇತ್ರದ ವ್ಯಾಪ್ತಿಯಲ್ಲಿ ಸರ್ಕಾರದ ವತಿಯಿಂದ ಎಸ್.ಇ.ಝಡ್‌ನ್ನು ಸ್ಥಾಪಿಸುತ್ತಿರುವುದಿಲ್ಲ. ಈ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಖಾಸಗಿದಾರರು ಎಸ್.ಇ.ಝಡ್ ಸ್ಥಾಪಿಸಲು ಮುಂದೆ ಬಂದಲ್ಲಿ ಸರ್ಕಾರವು ಅಗತ್ಯ ನೆರವನ್ನು ನೀಡುತ್ತದೆ.

ಆ) ಕೆಎಸ್ಎಸ್ಐಡಿಸಿ ಇವರು ಸದರಿ ಕ್ಷೇತ್ರದಲ್ಲಿ ಈಗಾಗಲೇ ಕೈಗಾರಿಕಾ ವಸಾಹತನ್ನು ಸ್ಥಾಪಿಸಿದ್ದು, ಇದರಲ್ಲಿ 42 ಶೆಡ್‌ಗಳನ್ನು ನಿರ್ಮಿಸಿದ್ದು ಹಾಗೂ 5 ಪ್ಲಾಟ್‌ಗಳನ್ನು ಅಭಿವೃದ್ಧಿ ಪಡಿಸಿರುತ್ತಾರೆ.

ಇ) ಭಾರತ ಸರ್ಕಾರದ 2001ನೇ ಜನಗಣತಿ ಪ್ರಕಾರ ಸದರಿ ಕ್ಷೇತ್ರದಲ್ಲಿ ಒಟ್ಟು 5,46,000 ಜನಸಂಖ್ಯೆ ಇದ್ದು ಅದರಲ್ಲಿ 2,44,000 ಜನ ಪರಿಶಿಷ್ಟ ಜಾತಿಯವರಾಗಿದ್ದು ಹಾಗೂ 4,262 ಜನ ಪರಿಶಿಷ್ಟ ಪಂಗಡದವರಾಗಿರುತ್ತಾರೆ.

ಈ) ಇಲ್ಲ.